## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 266 (406)

ಸದಸ್ಯರ ಹೆಸರು : ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 23.09.2020

ಉತ್ತರಿಸುವ ಸಚಿವರು : ಕಂದಾಯ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರವು ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಹಲವು ಸೆಕ್ಷನ್‌ಗಳನ್ನು ತೆಗೆದು ಹಾಕಲು ನಿರ್ಧರಿಸಿರುವುದು ನಿಜವೇ; ಸದರಿ ಸೆಕ್ಷನ್‌ಗಳು ಯಾವುವು; ಅವುಗಳಲ್ಲಿರುವ ಷರತ್ತುಗಳೇನು; ಅವುಗಳನ್ನು ತೆಗೆದು ಹಾಕಲು ಇರುವ ಸಕಾರಣಗಳೇನು; | ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಎಲ್ 39 ಶಾಸನ 2020 ದಿನಾಂಕ 13.07.2020ರನ್ವಯ ಕರ್ನಾಟಕ ಭೂ ಸುಧಾರಣಾ ಕಾಯ್ದೆಯ ಕಲಂ 63, ಕಲಂ 70, ಕಲಂ 72, ಕಲಂ 79ಎ, ಕಲಂ 79ಬಿ, ಕಲಂ 79ಸಿ, ಕಲಂ 80, ಕಲಂ 80ಎ, ಕಲಂ 81, ಕಲಂ 104, ಕಲಂ 109 ಕ್ಕೆ ತಿದ್ದುಪಡಿ ತರಲಾಗಿದೆ.<br><br>ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 79ಎ ಅಡಿಯಲ್ಲಿ ಯಾರೇ ಕೃಷಿಕರಿದ್ದರೂ ಸಹ ಅವರ ವಾರ್ಷಿಕ ವರಮಾನ ಇತರೆ ಕೃಷಿಯೇತರದಿಂದ ರೂ.25.00 ಲಕ್ಷಗಳಿಗಿಂತ ಹೆಚ್ಚು ವರಮಾನವಿದ್ದರೆ ಕೃಷಿ ಜಮೀನು ಕೊಂಡುಕೊಳ್ಳಲು ಅರ್ಹತೆ ಇಲ್ಲವಾಗಿತ್ತು. ಅಲ್ಲದೆ, ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 79ಬಿ ರಡಿಯಲ್ಲಿ ಯಾರೇ ಕೃಷಿ ಜಮೀನನ್ನು ಕೃಷಿಯೇತರರು ಕೊಂಡುಕೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲವಾಗಿತ್ತು.<br><br>ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 79ಎ ಮತ್ತು 79ಬಿ ಅಡಿ ಒಟ್ಟು 83,171 ಪ್ರಕರಣಗಳು ದಾಖಲಾಗಿದ್ದು, ಒಟ್ಟು 1,76,189-37 ಎಕರೆ ವಿಸ್ತೀರ್ಣವನ್ನು ಒಳಗೊಂಡಿರುತ್ತದೆ. ಅದರಲ್ಲಿ ಈ ಪ್ರಕರಣಗಳು ಇತ್ಯರ್ಥವಾಗಿ ಇನ್ನೂ 12,231 ಪ್ರಕರಣಗಳು ಬಾಕಿಯಿದ್ದು, ಅದರಲ್ಲಿ 24,553-3 ವಿಸ್ತೀರ್ಣದ ಜಮೀನು ಇರುತ್ತದೆ. ಈ ಇತ್ಯರ್ಥವಾಗದ ಬಾಕಿ ಇರುವ ಪ್ರಕರಣಗಳ ಬಗ್ಗೆ ಹಾಗೂ ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 79ಎ ಮತ್ತು 79ಬಿ ಪ್ರಕರಣಗಳು ಸಮರ್ಪಕವಾಗಿ ಅನುಷ್ಠಾನವಾಗುತ್ತಿಲ್ಲದ್ದನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 16199/2019 ರ ಪ್ರಕರಣದಲ್ಲಿ ಗಮನಿಸಿದೆ.<br><br>ಮುಂದುವರೆದು, ರಾಜ್ಯದಲ್ಲಿ ಒಟ್ಟು 190-50 ಲಕ್ಷ ಹೆಕ್ಟೇರ್ ಜಮೀನು ಇದ್ದು, ಅದರಲ್ಲಿ ಅರಣ್ಯ ಭೂಮಿ 30-73 ಲಕ್ಷ ಹೆಕ್ಟೇರ್ ಇರುತ್ತದೆ. ಅದೇ ರೀತಿ ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನು [Not available for cultivation] 22-94 ಲಕ್ಷ ಹೆಕ್ಟೇರ್ ಜಮೀನು ಇರುತ್ತದೆ. ಹಾಗೆಯೇ ಬೀಳುಬಿದ್ದ ಜಮೀನು [fallow land] 22-07 ಲಕ್ಷ ಹೆಕ್ಟೇರ್ ಜಮೀನು ಇರುತ್ತದೆ. ವ್ಯವಸಾಯ ಮಾಡದೇ ಬೀಳುಬಿದ್ದ ಜಮೀನುಗಳು [Un |

| | | |
|---|---|---|
| | | cultivated land excluding fallow land] ಒಟ್ಟು 11-79 ಲಕ್ಷ ಹೆಕ್ಟೇರ್ ಜಮೀನು ಇರುತ್ತದೆ. ಈ ವಿಧೇಯಕದಿಂದ ಪ್ರಸಕ್ತ ಕೃಷಿಕರಲ್ಲದವರೂ ಸಹ ಕೃಷಿ ಜಮೀನನ್ನು ಕೊಂಡುಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ಬೀಳು ಬಿದ್ದ ಜಮೀನುಗಳಲ್ಲಿ ಕೃಷಿ ಮಾಡಲು ಅವಕಾಶ ಕಲ್ಪಿಸಬಹುದಾಗಿದೆ. ವಿಶೇಷವಾಗಿ ಯುವ ಪೀಳಿಗೆಯನ್ನು ತಾಂತ್ರಿಕತೆಯ ಮೂಲಕ ಕೃಷಿ ಕಡೆಗೆ ಸೆಳೆಯಲು ಅನುಕೂಲವಾಗುತ್ತದೆ.<br><br>ಹೆಚ್ಚು ಜನ ಕೃಷಿ ಜಮೀನನ್ನು ಕೊಂಡುಕೊಳ್ಳಲು ಪ್ರಾರಂಭಿಸಿದರೆ ರೈತರ ಜಮೀನಿನ ಬೆಲೆಯು ಸಹ ಸ್ವಾಭಾವಿಕವಾಗಿ ಹೆಚ್ಚಾಗುತ್ತದೆ.<br><br>ಆರ್ಥಿಕವಾಗಿ ಸಬಲರಾಗಿದ್ದವರು ಕೃಷಿ ಭೂಮಿಯನ್ನು ಖರೀದಿಸಿ ಆಧುನಿಕ ರೀತಿಯಲ್ಲಿ ಕೃಷಿ ಮಾಡುವುದರಿಂದ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿಯೂ ಕೂಡ ವೃದ್ಧಿಯಾಗುತ್ತದೆ. ಇದರಿಂದ ಕೃಷಿ ಉತ್ಪನ್ನಗಳ ಉತ್ಪಾದನೆಯೂ ಸಹ ಹೆಚ್ಚಾಗಲಿದೆ ಹಾಗೂ ಕೃಷಿ ಮಾಡುವವರ ಸಂಖ್ಯೆಯೂ ಸಹ ಗಣನೀಯವಾಗಿ ಹೆಚ್ಚಾಗಲಿದೆ.<br><br>ಬಹುತೇಕ ರಾಜ್ಯಗಳಲ್ಲಿ ಇರುವ ಭೂ ಸುಧಾರಣಾ ಕಾಯ್ದೆಗಳಲ್ಲಿ ಕಲಂ 79ಎ ಮತ್ತು 79ಬಿ ಅಂತಹ ಷರತ್ತುಗಳು ಇಲ್ಲದೆ ಇರುವುದರಿಂದ ನಮ್ಮ ರಾಜ್ಯದ ಹೆಚ್ಚಿನ ಜನರು ನೆರೆ ರಾಜ್ಯಗಳಲ್ಲಿ ಜಮೀನುಗಳನ್ನು ಕೊಂಡುಕೊಳ್ಳುತ್ತಿದ್ದು, ಈ ವಿಧೇಯಕದಿಂದ ನಮ್ಮ ರಾಜ್ಯದಲ್ಲಿ ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ಉತ್ತೇಜಿಸಬಹುದಾಗಿದೆ. |
| (ಆ) | ಈ ಸೆಕ್ಷನ್‌ಗಳನ್ನು ತೆಗೆದು ಹಾಕುವುದರಿಂದ ರಾಜ್ಯದ ರೈತರಿಗೆ ಹಾಗೂ ಈ ಕಾಯ್ದೆ ಜಾರಿಗೆ ತಂದ ದೇವರಾಜು ಅರಸುರವರಿಗೆ ಸರ್ಕಾರ ಅಪಮಾನ ಮಾಡಿದಂತಾಗುವುದಿಲ್ಲವೆ; (ವಿವರ ನೀಡುವುದು) | ವಿವರವನ್ನು (ಅ) ರಲ್ಲಿ ವಿವರಿಸಲಾಗಿದೆ. |
| (ಇ) | ಭೂ ಸುಧಾರಣಾ ಕಾಯ್ದೆಯ ಈ ಸೆಕ್ಷನ್‌ಗಳನ್ನು ಸರ್ಕಾರವು ತೆಗೆದು ಹಾಕುವುದರಿಂದ ಭವಿಷ್ಯದಲ್ಲಿ ರೈತರು ತಮ್ಮ ಭೂಮಿಗಳನ್ನು ಹಣ ಉಳ್ಳವರಿಗೆ ಬಿಕರಿ ಮಾಡಿ ಹಾಳಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿವರವನ್ನು (ಅ)ರಲ್ಲಿ ವಿವರಿಸಲಾಗಿದೆ. |
| (ಈ) | ಬಂದಿದ್ದರೆ, ಸರ್ಕಾರ ಈ ಸಂಬಂಧ ಯಾವ ಕ್ರಮ ಕೈಗೊಳ್ಳಲಿದೆ? | ಅನ್ವಯಿಸುವುದಿಲ್ಲ. |

ಸಂಖ್ಯೆ: ಕಂಇ 05 ಎಲ್‌ಆರ್‌ಎಸ್ 2020

(ಆರ್.ಅಶೋಕ)
ಮಾನ್ಯ ಕಂದಾಯ ಸಚಿವರು